ಶ್ರೀ ಪಿ. ಎಂ. ನಾಡಗೌಡ.—ಸರಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಬಿ. ಪರಮೇಶ್ವರಪ್ಪ.—ಸೊತ ಅನುಭವ ಪಡೆದು ಈ ಬಿಲ್ಲನ್ನು ಮುಂಡಿಸುತ್ತೀವೆಂದ ಹೇಳಿದಿರಿ. ಐದುವರ್ಷ ಅನುಭವಿಸಿರತಕ್ಕ ಅನುಭವ ಹೀಗಿರುವಾಗ ಇನ್ನೂ ಹೊಸ ಅನುಭವ ಪಡೆದು ಬಿಲ್ಲು ತರಲಿಕ್ಕೆ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಪಿ. ಎಂ. ನಾಡಗೌಡ.—ಐದು ವರ್ಷದ ಅನುಭವವಾಗಿಲ್ಲ. ನನಗೆ ಎರಡು ವರ್ಷ ಇರಲಿಕ್ಕೆ ಹತ್ತಿದೆ.

ಶ್ರೀ ಎಂ. ನಾಗಪ್ಪ —ಜಿಲ್ಲಾ ಪರಿಷತ್ತು ಮಾಡಿದರೆ ಮಂತ್ರಿಗಳ ಅಧಿಕಾರ ಕಡಿಮೆಯಾಗುತ್ತವೆ. ಆಗ ಜನರು ಎಂ. ಎಲ್. ಎ. ಆಗಲಿಕ್ಕೆ ಆಗಲೀ ಮಂತ್ರಿಗಳು ಆಗಲಿಕ್ಕೆ ಆಗಲೀ ಇಷ್ಟಪಡುವುದಿಲ್ಲ. ಜಿಲ್ಲಾ ಪರಿಷತ್ತಿನ ಪ್ರೆಸಿಡೆಂಟ್ ಆಗುವಕ್ಕೆ ಇಷ್ಟಪಡುತ್ತಾರೆ. ಆದ್ದರಿಂದ ಅಧಿಕಾರ ಡೀಸೆಂಟ್ರಲೈಸು ಮಾಡುವಾರದು ಎನ್ನುವ ಉದ್ದೇಶವಿಂದ ಅದನ್ನು ತಡೆಹಿಡಿದಿದ್ದಾರೆ ಎಂದು ತಿಳಿದು ಬಂದಿದೆ ಇದು ಸರಿಯೇ ?

ಶ್ರೀ ಪಿ. ಎಂ. ನಾಡಗೌಡ.—ಸರಕಾರದವರು ಒಪ್ಪಿಕೊಂಡಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮಾಡಲಿಕ್ಕೇ ಬೇಕಾಗುತ್ತದೆ. ಈ ದೊಡ್ಡ ಕಾಯಿದೆಯಲ್ಲಿ ಎಲ್ಲಾ ವಿಚಾರ ಮಾಡಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಎ. ಆರ್. ಪಂಚಗಾವಿ.—ಸ್ವಾಮಿ, ಜಿಲ್ಲಾ ಪರಿಷತ್ತು ಕಾಯಿದೆ ತಂದರೆ ಸರಕಾರಕ್ಕೆ ಎಷ್ಟು ಖರ್ಚು ಬೀಳಬಹುದು ? ಇದರಿಂದ ರೇಟ್ ಪೇಯರ್ಸ್ ಮೇಲೆ ಹೆಚ್ಚು ಬೀಳಬಹುದೇ ?

ಶ್ರೀ ಪಿ. ಎಂ. ನಾಡಗೌಡ.—ಈಗ ಸರ್ಕಾರದ ವ್ಯವಹಾರಗಳಿಗಾಗಿ ಏನು ಖರ್ಚು ಮಾಡುತ್ತಿದ್ದೇವೊ ಅದೇ ಖರ್ಚಿನಲ್ಲಿ ಆ ವ್ಯವಹಾರಗಳಿಗೂ ಆಗಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಏನ್. ಹುಚ್ಚಮಾಸ್ತಿಗೌಡ.—1967ನೇ ಇಸವಿಯಲ್ಲಿ ಮಹಾಚುನಾವಣೆ ಇದ್ದಾಗ ಅಡಳಿತದಲ್ಲಿ ತೀವ್ರ ಭಿನ್ನಾಭಿಪ್ರಾಯ ಉಂಟಾಗಿ ಈ ಕೆಲಸ ನಿಂತುಹೋಯಿತು. ಇತ್ತೀಚೆಗೂ ಇದೇ ಭಿನ್ನಾಭಿಪ್ರಾಯ ಇದೆ. ಆದುದರಿಂದ ಈಗ ಇದನ್ನು ಬಗೆಹರಿಸುವುದಕ್ಕೆ ಏನಾದರೂ ತಿರ್ಮಾನ ಮಾಡಿದ್ದೀರಾ?

ಶ್ರೀ ಪಿ. ಎಂ. ನಾಡಗೌಡ.—1967ರಲ್ಲಿ ನಾನು ಮಂತ್ರಿಯಾಗಿರಲಿಲ್ಲ. ಈಗ ಮಾನ್ಯ ಸದಸ್ಯರು ಹೇಳಿದಂಥ ಬಿಕ್ಕಟ್ಟು ಏನೂ ಇಲ್ಲ.

Starting of State Owned Industries in K. G. F.

477. Sri S. R. SHANMUGAM (K. G. F.).—

Will the Minister for Industries, Information and Publicity be pleased to state;—

(*a*) whether any provision has been made in the IV Five Year Plan to create opportunities to the retrenched personnel in K. G. F. by starting New State owned Industries in K. G. F. ;

(*b*) whether the Government has any alternative plan to create posts for the deserving candidates among them in other Industries ?

Sri M. RAJASEKHARA MURTHY (Minister for Industries, Information and Publicity).—

(*a*) No provision has been made to start any new State owned Industries in K. G. F.

(*b*) Government have no specific plans for the purpose.

ಶ್ರೀ ಎಸ್. ಆರ್. ಷಣ್ಮುಗಂ.—ಸ್ವಾಮಿ, ಕೋಲಾರ ಚಿನ್ನದ ಗಣಿಯಲ್ಲಿ ಮೊದಲು 28 ಸಾವಿರ ಲೇಬರರ್ಸ್ ಕೆಲಸ ಮಾಡಿಕೊಂಡಿದ್ದರು. ಈಗ ಅದೇ ಮೈನಿಂಗ್‌ನಲ್ಲಿ 12 ಸಾವಿರ ವರ್ಕರ್ಸ್ ಕೆಲಸ ಮಾಡುತ್ತಿದ್ದಾರೆ. ಇದರ ದೆಸೆಯಿಂದಾಗಿ 2 ಲಕ್ಷ ಜನ ಸಂಸಾರ ತೊಂದರೆಯಲ್ಲಿದ್ದಾರೆ. ಈ ರೀತಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ಸ್ ಜಾಸ್ತಿಯಾಗಿರುವುದರಿಂದ ಅಲ್ಲಿಯ ನಿರುದ್ಯೋಗಿಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಉದ್ಯೋಗವನ್ನು ದೊರಕಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಖಾಸಗಿಯವರು ಯಾರಾದರೂ ಇಂಡಸ್ಟ್ರೀಯನ್ನು ಶುರು ಮಾಡುತ್ತೇವೆ ಎಂದು ಮುಂದೆ ಬಂದರೆ ಅವರಿಗೆ ಸರ್ಕಾರದಿಂದ ಏನು ಸೌಲಭ್ಯಗಳು ಬೇಕೋ ಅದನ್ನು ಪರಿಶೀಲನೆ ಮಾಡಬಹುದು.

ಶ್ರೀ ಇ. ನಾರಾಯಣಗೌಡ.—ಈಗ ರಾಜ್ಯ ಸರ್ಕಾರದಲ್ಲಿ ಸ್ಥಾಪನೆ ಆಗಿರುವ ಭಾರತ್ ಅರ್ತ್ ಮೂವರ್ಸ್ ಇಂಡಸ್ಟ್ರಿ ಏನು ಇದೆಯೋ ಅದರಿಂದ ಮೈಸೂರಿನವರಿಗೆ ಹೆಚ್ಚಿನ ಪ್ರಯೋಜನ ಏನೂ ಆಗುತ್ತಿಲ್ಲ. ಮದ್ರಾಸ್, ಕೇರಳ ಹೀಗೆ ಹೊರಗಡೆಯಿಂದ ಲೇಬರರ್ಸ್‌ನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ಮೈಸೂರಿನ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಿಸಿದರೆ ಆಗ ನಮ್ಮವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಭಾರತ ಸರ್ಕಾರಕ್ಕೆ ಇದರ ಬಗ್ಗೆ ಒತ್ತಾಯಪೂರ್ವಕವಾಗಿ ತಿಳುವಳಿಕೆ ಕೊಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದುವರೆಗೆ ಅಲ್ಲಿ ನಮ್ಮವರೇ ಆದ ಐ.ಎ.ಎಸ್. ಅಧಿಕಾರಿ ಇದ್ದರು. ಭಾರತ ಸರ್ಕಾರದವರ ಅಭಿಪ್ರಾಯವೂ ಕೂಡ ಮೈಸೂರಿನವರಿಗೇ ಕೊಡಬೇಕು ಎಂದು ಇದೆ. ಮತ್ತೆ ಇದರ ಬಗ್ಗೆ ಭಾರತ ಸರ್ಕಾರಕ್ಕೆ ಬರೆದಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಭಾರತ್ ಅರ್ತ್ ಮೂವರ್ಸ್ ಸ್ಟಾರ್ಟ್ ಆದದ್ದು ಅಲ್ಲಿಯ ಸರ್‌ಪ್ಲಸ್ ಲೇಬರಿಗೆ ಕೆಲಸಗಳನ್ನು ಕೊಡಬೇಕು ಎಂದು. ಈಗ ಬೇರೆಯವರನ್ನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಸುಧಾರಿಸಲಿಕ್ಕೆ ಆಗುವುದಿಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರ್ಕಾರದ ಅಭಿಪ್ರಾಯ ಏನು ಇದೆಯೋ, ನಮ್ಮ ಅಭಿಪ್ರಾಯವೂ ಅದೇ ರೀತಿ ಇದೆ. ಸರ್‌ಪ್ಲಸ್ ಲೇಬರರ್ಸ್ ಇದ್ದುದೇ ಯಾರು ಯಾರು ಮೆಡಿಕಲೀ ಫಿಟ್ ಆಗಿರುತ್ತಾರೋ ಅಂಥವರನ್ನು ಅಬ್ಸಾರ್ಬ್ ಮಾಡಬೇಕು ಎನ್ನುವ ಅಭಿಪ್ರಾಯ.

Death of Children due to Food poisoning in Kengeri

510. Sri B. B. SAYANAK (Belgaum).—

Will the Chief Minister be pleased to state :—

(*a*) whether two children died of food poisoning at their home in Adi-Karnatak Colony, Kengeri on 2nd August 1969 ;

(*b*) the number of persons of the same family that were admitted in the Victoria Hospital in a critical condition ;

(*c*) whether it is a fact that the food poisoning has occurred after they consumed the rice purchased from the Ration Shop ?

Sri VEERENDRA PATIL (Chief Minister).—

(*a*) Yes. Two Children were found dead after taking their food

(*b*) Six.

(*c*) The matter is under investigation.

Sri B. B. SAYANAK.—May I know out of the six persons admitted into the Victoria Hospital, how many survived and how many died ?